

# ಕಿರಾತಕ ಬರಲು ಕೊಂಚ ತಡ

ಕೆಜಿಎಫ್ ಚಿತ್ರದಲ್ಲಿ ಬ್ಯುಸಿಯಾಗಿದ್ದ ಯಶ್, ಅದರ ನಡುವೆಯೇ 'ಕಿರಾತಕ 2' ಸಿನಿಮಾದಲ್ಲಿ ನಟಿಸಲು ಒಪ್ಪಿಕೊಂಡು ಒಂದು ಹಂತದ ಚಿತ್ರೀಕರಣವನ್ನೂ ಮುಗಿಸಿದ್ದರು. ಆದರೆ ಟೈಟಲ್‌ಗೆ ಸಂಬಂಧಿಸಿದಂತೆ ಎದ್ದ ವಿವಾದದಿಂದ ಚಿತ್ರತಂಡ 'ಮೈ ನೇಮ್ ಈಸ್ ಕಿರಾತಕ' ಎಂದು ಬದಲಿಸಿಕೊಳ್ಳುವುದಾಗಿ ಹೇಳಿತ್ತು. ಚಿತ್ರಕ್ಕೆ ಅಂತಿಮವಾಗಿ ಯಾವ ಹೆಸರು ಇರಿಸಿಕೊಳ್ಳಲಾಗುತ್ತದೆ ಎಂಬ ಕುರಿತು ಇನ್ನೂ ಸ್ಪಷ್ಟತೆ ಇಲ್ಲ.

ಇಷ್ಟು ಉತ್ಸಾಹದಿಂದ ಆರಂಭಗೊಂಡ ಚಿತ್ರ ಒಂದು ಹಂತದ ಚಿತ್ರೀಕರಣದ ನಂತರ ಸ್ಥಗಿತಗೊಂಡಿದೆ. ಯಶ್, ಕೆಜಿಎಫ್ ಚಿತ್ರದ ಪ್ರಮೋಷನ್‌ನಲ್ಲಿ ಬ್ಯುಸಿಯಾಗಿದ್ದರಿಂದ ಚಿತ್ರೀಕರಣದಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ. ಕೆಜಿಎಫ್ ಬಿಡುಗಡೆಯಾದ ಮೇಲೆ ಕಿರಾತಕನ ಕೆಲಸದಲ್ಲಿ ತೊಡಗಿಕೊಳ್ಳುತ್ತಾರೆ ಎಂದು ಹೇಳಲಾಗಿತ್ತು. ಆದರೆ ಯಶ್ ಈಗ ಕೆಜಿಎಫ್ 2 ಚಿತ್ರೀಕರಣ ಆರಂಭಿಸುವ ಯೋಚನೆಯಲ್ಲಿದ್ದಾರೆ. ಕೆಜಿಎಫ್ ಮೊದಲನೇ ಭಾಗದ ಚಿತ್ರೀಕರಣಕ್ಕೆ ಎರಡು ವರ್ಷ ತಗುಲಿತ್ತು. ಈಗ ಎರಡನೇ ಭಾಗವನ್ನು ಅದೆಷ್ಟು ವರ್ಷ ತೆಗೆದುಕೊಂಡು ಚಿತ್ರೀಕರಿಸಲಾಗುತ್ತದೆಯೋ ಗೊತ್ತಿಲ್ಲ. ಹಾಗಾದರೆ ಒಂದು ಹಂತದ ಚಿತ್ರೀಕರಣ ಮುಗಿಸಿರುವ ಕಿರಾತಕನ ಕತೆಯೇನು? 'ಕಿರಾತಕ ಸಿನಿಮಾವನ್ನು ಕೈಬಿಡಲಾಗಿದೆ' ಎಂಬ ಸುದ್ದಿಯೊಂದು ಗಾಂಧಿನಗರದ ಗಲ್ಲಿಯ ಬಿಲ್ಡಿಗಳ ಬಾಯಿಯಲ್ಲಿ ಹರಿದಾಡುತ್ತಿದ್ದವು.

ಈ ಸುದ್ದಿ ಜೋರಾಗುತ್ತಿದ್ದಂತೆಯೇ ಸ್ವತಃ ಯಶ್ ಈ ಕುರಿತು ಸ್ಪಷ್ಟನೆ ನೀಡಿದ್ದಾರೆ. 'ಕಿರಾತಕ ಚಿತ್ರವನ್ನು ನಿಲ್ಲಿಸುವುದಿಲ್ಲ. ಖಂಡಿತ ಮಾಡ್ತೇನೆ' ಎನ್ನುವುದು ಅವರ ಸ್ಪಷ್ಟ ಮಾತು. ಕೆಜಿಎಫ್ 2 ಚಿತ್ರವನ್ನು ಮೊದಲು ಮಾಡಿಮುಗಿಸಬೇಕು. ಮತ್ತು ಕಿರಾತಕ ಚಿತ್ರಕ್ಕೆ ಗಡ್ಡ ಬೇಕಾಗುವುದಿಲ್ಲ. ಕೆಜಿಎಫ್ ಮುಗಿಸುವವರೆಗೆ ಅದೇ ಗೆಟಪ್‌ನಲ್ಲಿ ಇರಬೇಕಾಗಿರುವುದರಿಂದ ಕಿರಾತಕ ಶೂಟಿಂಗ್‌ನಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ ಎಂಬುದೂ ಇನ್ನೊಂದು ಕಾರಣ. ಈ ಎಲ್ಲ ಕಾರಣಕ್ಕೆ ಕಿರಾತಕ ಚಿತ್ರಕ್ಕೆ ಬಿದ್ದಿರುವುದು ಅಲ್ಪವಿರಾಮವೇ ಹೊರತು ಪೂರ್ಣವಿರಾಮ ಅಲ್ಲ ಎನ್ನುವುದು ಯಶ್ ಅಭಿಮಾನಿಗಳಿಗೆ ಸಮಾಧಾನ ನೀಡಿದೆ. ■





# ಬಜಾರ್‌ನಲ್ಲಿ ಕಳ್ಳರ ಕಾಟ!

ತಮ್ಮ ಚೌಕಟ್ಟಿನೊಳಗೆ ಪ್ರಯೋಗಾತ್ಮಕ ಸಿನಿಮಾಗಳನ್ನು ಮಾಡುತ್ತ, ಗಲ್ಲಾಪೆಟ್ಟಿಗೆಯಲ್ಲಿಯೂ ಗೆಲ್ಲುತ್ತ ಬಂದಿರುವ ನಿರ್ದೇಶಕ ಸಿಂಪಲ್ ಸುನಿ 'ಬಜಾರ್' ಮೂಲಕ ಆ್ಯಕ್ಷನ್ ಸಿನಿಮಾವೊಂದಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಧನವೀರ್ ಮತ್ತು ಅದಿತಿ ಪ್ರಭುದೇವ ನಾಯಕ–ನಾಯಕಿಯಾಗಿ ನಟಿಸಿರುವ ಈ ಚಿತ್ರ ಚಿತ್ರಮಂದಿರದಲ್ಲಿ ಅಬ್ಬಬ್ಬಾ ಎನ್ನುವಷ್ಟು ಸದ್ದು ಮಾಡದಿದ್ದರೂ ಬಂಡವಾಳದ ಗಡಿಯನ್ನು ದಾಟಿ ಲಾಭದ ಗುರಿಯತ್ತ ನಡೆಯುತ್ತಿದೆ. ಅಲ್ಲಿಗೆ ಸುನಿ ಬಜಾರ್‌ನಲ್ಲಿ ಮಿನಿಮಂ ವ್ಯಾಪಾರ ಗ್ಯಾರಂಟಿ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ.

ಇದೇ ಸಮಯದಲ್ಲಿ ಆ ಬಜಾರ್‌ನಲ್ಲಿ ಕಳ್ಳರ ಕಾಟವೂ ಹೆಚ್ಚಿದೆಯಂತೆ. ಚಿತ್ರದ ಯಶಸ್ಸನ್ನು ಹಂಚಿಕೊಳ್ಳಲು ಇತ್ತೀಚೆಗೆ ಸುನಿ ಪತ್ರಿಕಾಗೋಷ್ಠಿಯನ್ನು ಕರೆದಿದ್ದರು. ಗೆಲುವಿನ ಸಂತಸದ ಜತೆಯಲ್ಲಿ ಪೈರಸಿ ಕಾಟದ ಬಗ್ಗೆ ಬೇಸರವೂ ಅವರ ಮಾತಿನಲ್ಲಿ ಎದ್ದು ಕಾಣುತ್ತಿತ್ತು. ತಮ್ಮ ಸಿನಿಮಾದ ಗೆಲುವಿನ ನಾಗಾಲೋಟಕ್ಕೆ ಪೈರಸಿ ಕಳ್ಳರು ರೋಡ್‌ಹಂಪ್‌ಗಳ ಹಾಗೆ ತಡೆಯೊಡ್ಡುತ್ತಿದ್ದಾರೆ ಎನ್ನುವುದು ಅವರ ನೋವಿಗೆ ಕಾರಣ.

ಸಿನಿಮಾ ಬಿಡುಗಡೆಯಾಗುತ್ತಿದ್ದ ಹಾಗೆಯೇ ಬಜಾರ್ ಇಡೀ ಸಿನಿಮಾವನ್ನು ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಲಾಗಿತ್ತು. ಈ ಕುರಿತಾಗಿ ಸೈಬರ್ ಪೊಲೀಸರಿಗೆ ದೂರನ್ನೂ ನೀಡಿರುವ ಸುನಿ ಅವರ ಮೂಲಕವೇ ಕಳ್ಳರ ಕಾಟವನ್ನು ಎದುರಿಸಲು ಮುಂದಾಗಿದ್ದಾರೆ.

'ಮೊದಲು ಯೂಟ್ಯೂಬ್‌ನಲ್ಲಿ ಪೂರ್ತಿ ಸಿನಿಮಾದ ಲಿಂಕ್ ಹಾಕಿದ್ದರು. ಆ ಲಿಂಕ್ ಅನ್ನು ತೆಗೆಸಿದೆವು. ನಂತರ ಟೆಲಿಗ್ರಾಂನ ಮೂಲಕ ಪ್ರಸಾರವಾಗಲು ಆರಂಭವಾಯ್ತು. ಟೆಲಿಗ್ರಾಂನಲ್ಲಿ ಲಿಂಕ್ ಇರುವುದಿಲ್ಲ. ಅದು ಮೆಸೇಜ್ ರೂಪದಲ್ಲಿ ಹರಿದಾಡುತ್ತಿರುತ್ತದೆ. ಹಾಗಾಗಿ ಅದನ್ನು ತೆಗೆಸುವುದೂ ಕಷ್ಟ. ಹಾಗಾಗಿ ಆ ಮೆಸೇಜ್‌ಗೆ ವೈರಸ್ ಸೇರಿಸಿ ಮೆಸೇಜ್ ತೆರೆದರೆ ಮೊಬೈಲ್ ಹ್ಯಾಂಗ್ ಆಗುವ ರೀತಿ ಮಾಡಿದ್ದೇವೆ. ಆದರೆ ಅಷ್ಟರಲ್ಲಾಗಲೇ ಸುಮಾರು ಒಂದು ಲಕ್ಷ ವ್ಯೂಸ್ ಆಗಿವೆ' ಎಂದು ಅವರು ಬೇಸರದಿಂದ ಹೇಳಿಕೊಳ್ಳುತ್ತಾರೆ.

ಈ ಬೇಸರದ ನಡುವೆಯೂ ಸಿನಿಮಾ ಚಿತ್ರಮಂದಿರಗಳಲ್ಲಿ ಚೆನ್ನಾಗಿ ಹೋಗುತ್ತಿರುವುದು ಅವರಿಗೆ ಕೊಂಚ ಸಮಾಧಾನ ನೀಡಿದೆ. ■

ಚಿತ್ರಗಳು: ಕೆ.ಎನ್. ನಾಗೇಶ್‌ಕುಮಾರ್